# 1. ಅಣ್ಣ-ತಮ್ಮಂದಿರು

ಹೆಣ್ಣೀನ ಜನುಮಕ ಅಣ್ಣತಮ್ಮರು ಬೇಕ
ಬೆನ್ನ ತಟ್ಟುವರು ಸಭೆಯೊಳಗ । ಸಾವಿರ ।
ಹೊನ್ನ ತಟ್ಟುವರು ಉಡಿಯೊಳಗ ॥

ಅವರೀಗಿ ಅವರಣ್ಣ ಅವಲಕ್ಕಿ ಖಳುವ್ಯಾನ ।
ನಮ್ಮಣ್ಣನೇನು ಬಡವೇನ । ಖ್ಯಾದೀಗಿ ।
ಗರಿಯೊಳಗ ಘಳಗಿ । ಖಳಸ್ಯಾನ ।

ಅಕ್ಕತಂಗೆರು ಮೇಲ ಮುತ್ತು ಮಾಣಿಕ ಮೇಲ ।
ಉತ್ತರಿ ಸಾತಿ ಮಳಿ ಮೇಲ । ನನ ತಮ್ಮ ॥
ನೀ ಮೇಲ ನನ್ನ ಬಳಗಾಕ ॥

ಸೊಲ್ಲಾಪುರದಣ್ಣಗ ನಿಲ್ಲದಲೆ ಬರಹೇಳ ।
ಸೀರ್ಯೊಲ್ಲೆ ಅವನ ಕುಬಸೊಲ್ಲೆ । ಅಣ್ಣನ ।
ಮಾರಿ ನೋಡಂಥ ಮನವಾಗಿ ॥

**– ಜಾನಪದ**

---

**ಕೃತಿ 1)**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ**

1) ಹೆಣ್ಣಿನ ಜನುಮಕೆ ಯಾರು ಬೇಕು ?

2) ಅಣ್ಣನು ಖ್ಯಾದಿಗಿ ಗರಿಯೊಳಗೆ ಏನು ಕಳಿಸುವನು ?

3) ಮಳೆಗಳಲ್ಲಿ ಯಾವ ಮಳೆಗಳು ಶ್ರೇಷ್ಠವಾದವುಗಳು ?

4) ತಂಗಿಗೆ ಯಾರ ಮುಖ ನೋಡುವ ಮನಸಾಗಿದೆ ?

**ಬ) ಕೆಳಗಿನ ಶಬ್ದಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ**

| | | | |
|---|---|---|---|
| ಜನುಮ | – | ಖಳುವ್ಯಾನ | – |
| ಬಳಗಾಕ | – | ಸೀರ್ಯೊಲ್ಲೆ | – |
| ಮಾರಿ | – | ನೋಡಂಥ | – |
| ಬಡವೇನ | – | ಸಾತಿ | – |

**ಕೃತಿ 2) ಕೆಳಗಿನ ಶಬ್ದಜಾಲವನ್ನು ಪೂರ್ಣಗೊಳಿಸಿರಿ.**

**ಕೆಳಗಿನ ಸಂಬಂಧ ಸೂಚಕ ಹೆಸರುಗಳನ್ನು ಬರೆಯಿರಿ.**

| ತಾಯಿಯ ತಮ್ಮ | ಮಗನ ಮಗಳು | ಮಗನ ಹೆಂಡತಿ | ಪತಿಯ ತಂದೆ |
|---|---|---|---|
| | | | |

**ಕೃತಿ 3) ‘ಹೆಣ್ಣುಮಗಳನ್ನು’ ನಾವು ಯಾವ ಯಾವ ರೂಪದಲ್ಲಿ ಕಾಣುತ್ತೇವೆ.**

**ಉದಾ : ತಾಯಿ**

**ಹೆಣ್ಣು ಮಗಳು** → ( ) → ( ) → ( ) → ( ) → ( )

**ಕೃತಿ 4) ಕೆಳಗಿನ ಶಬ್ದಗಳಿಗೆ ಜೋಡು ಶಬ್ದಗಳನ್ನು ಕವಿತೆಯಿಂದ ಗುರುತಿಸಿ ಬರೆಯಿರಿ.**

1) ಅಣ್ಣ ______ 2) ಅಕ್ಕ ______ 3) ಮುತ್ತು ______

**ಕೃತಿ 5) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಹುಡುಕಿ ಬರೆಯಿರಿ**

1) ಉತ್ತರಿ, ಸ್ವಾತಿ, ಮಳೆ
2) ಸೀರೆ, ಕುಬ್ಬಸ, ಸೊಲ್ಲಾಪುರ
3) ಅಣ್ಣ, ಬಡವ, ತಮ್ಮ
4) ಮುತ್ತು, ಮಾಣಿಕ, ಘಳಿಗೆ
5) ತಂಗಿ, ಖ್ಯಾದೀಗಿ, ಅಕ್ಕ

**ಕೃತಿ 6) ಈ ಪದ್ಯದಲ್ಲಿ ಬಂದಿರುವ ‘ಘಳಿಗೆ’ - ಈ ಶಬ್ದದ ಅರ್ಥ ಕೆಳಗಿನವುಗಳಲ್ಲಿ ಯಾವುದು ?**

1) ಮಡಿಕೆ
2) ಸೀರೆ
3) ವೇಳೆ

CM16W2